ಕರ್ನಾಟಕ ಸರ್ಕಾರ

**ಕಾಲೇಜು ಶಿಕ್ಷಣ ಇಲಾಖೆ**

ಸಂಖ್ಯೆ:ಕಾಶಿಇ/ಶೈವಿ/41/ಅಯೋದಿ/2016-17

ಕಾಲೇಜು ಶಿಕ್ಷಣ ಆಯುಕ್ತರ ಕಛೇರಿ.
ಬೆಂಗಳೂರು, ದಿನಾಂಕ: 19.06.2018.

# ಸುತ್ತೋಲೆ

**ವಿಷಯ:** 2018ನೇ ಜೂನ್ 21ರಂದು "ಅಂತರರಾಷ್ಟ್ರೀಯ ಯೋಗ ದಿನಾಚರಣೆ"ಯನ್ನಾಗಿ ಆಚರಿಸುವ ಬಗ್ಗೆ.

**ಉಲ್ಲೇಖ:**
1) ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಶಿಕ್ಷಣ ಇಲಾಖೆ (ಉನ್ನತ ಶಿಕ್ಷಣ) ಬೆಂಗಳೂರು, ರವರ ಪತ್ರ ಸಂಖ್ಯೆ: ಇಡಿ 01 ಯುಇಸಿ 2018 ದಿ:8.6.2018.
2) ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ಇವರ ದಿನಾಂಕ:25.05.2018ರ ಸಭಾ ನಡಾವಳಿಯ ಪ್ರತಿ.

*******

ವಿಶ್ವಸಂಸ್ಥೆಯು ಜೂನ್ 21 ನ್ನು **"ಅಂತರರಾಷ್ಟ್ರೀಯ ಯೋಗ ದಿನ"**ವನ್ನಾಗಿ ಘೋಷಿಸಿದ್ದು, ದಿನಾಂಕ: 21.06.2018 ರಂದು ಬೆಂಗಳೂರಿನ ಕಂಠೀರವ ಹೊರಾಂಗಣ ಕ್ರೀಡಾಂಗಣದಲ್ಲಿ ಅಂತರರಾಷ್ಟ್ರೀಯ ಯೋಗ ದಿನಾಚರಣೆಯನ್ನು ಆಚರಿಸಬೇಕೆಂದು ಉಲ್ಲೇಖ(2)ರ ಸಭೆಯು ತೀರ್ಮಾನಿಸಿದೆ. ಯೋಗ ದಿನಾಚರಣೆಯ ಬಗ್ಗೆ ವಿದ್ಯಾರ್ಥಿಗಳಲ್ಲಿ ಜಾಗೃತಿ ಮೂಡಿಸಲು ಈ ಕಾರ್ಯಕ್ರಮದಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ವಿದ್ಯಾರ್ಥಿಗಳು ಪಾಲ್ಗೊಳ್ಳಲು ಪ್ರೇರೇಪಿಸಿ ಕಾರ್ಯಕ್ರಮವನ್ನು ಯಶಸ್ವಿಗೊಳಿಸತಕ್ಕದ್ದೆಂದು ಸಭೆಯು ತೀರ್ಮಾನಿಸಿದೆ.

ಆದ್ದರಿಂದ, ದಿನಾಂಕ: 21.06.2018 ರಂದು ರಾಜ್ಯಮಟ್ಟದ 4ನೇ "ಅಂತರರಾಷ್ಟ್ರೀಯ ಯೋಗ ದಿನಾಚರಣೆ"ಯನ್ನು ಆಚರಿಸುವ ಬಗ್ಗೆ ಅಗತ್ಯ ಕ್ರಮ ಕೈಗೊಳ್ಳುವಂತೆ ಉಲ್ಲೇಖ(1)ರ ಪತ್ರದಲ್ಲಿ ಸೂಚಿಸಿದೆ. ಅದರಂತೆ, ಬೆಂಗಳೂರು ನಗರ ವ್ಯಾಪ್ತಿಯ ಎಲ್ಲಾ ಸರ್ಕಾರಿ, ಖಾಸಗಿ ಅನುದಾನಿತ ಹಾಗೂ ಅನುದಾನರಹಿತ ಕಾಲೇಜುಗಳ ವಿದ್ಯಾರ್ಥಿಗಳು ಮತ್ತು ಎನ್.ಎಸ್.ಎಸ್. / ಎನ್.ಸಿ.ಸಿ. / ಸ್ಕೌಟ್ಸ್ & ಗೈಡ್ಸ್ ವಿದ್ಯಾರ್ಥಿಗಳು ಕಾರ್ಯಕ್ರಮಾಧಿಕಾರಿಗಳ ಜೊತೆಗೆ ದಿನಾಂಕ:21.06.2017 ರಂದು ಬೆಳಗ್ಗೆ 7.00 ರಿಂದ 8.30ರವರೆಗೆ ಬೆಂಗಳೂರಿನ ಕಂಠೀರವ ಹೊರಾಂಗಣ ಕ್ರೀಡಾಂಗಣದಲ್ಲಿ ನಡೆಯಲಿರುವ "ಅಂತರರಾಷ್ಟ್ರೀಯ ಯೋಗ ದಿನಾಚರಣೆ" ಕಾರ್ಯಕ್ರಮದಲ್ಲಿ ಕಡ್ಡಾಯವಾಗಿ ಭಾಗವಹಿಸಲು ಅಗತ್ಯ ಕ್ರಮ ಕೈಗೊಳ್ಳುವಂತೆ ಸೂಚಿಸಲಾಗಿದೆ. ಈ ಪತ್ರದೊಂದಿಗೆ ಲಗತ್ತಿಸಿರುವ ಸಭಾ ನಡಾವಳಿಗಳಲ್ಲಿ ತಿಳಿಸಿರುವಂತೆ ಕ್ರಮ ಜರುಗಿಸಿ ಕೈಗೊಂಡ ಕ್ರಮದ ಬಗ್ಗೆ ಈ ಕಛೇರಿಗೆ ವರದಿ ನೀಡಲು ಸೂಚಿಸಲಾಗಿದೆ.

Website ಪ್ರಕಟಿಸಿ

ಕಾಲೇಜು ಶಿಕ್ಷಣ ಆಯುಕ್ತರು

ಇವರಿಗೆ: - **ಸೂಕ್ತ ಕ್ರಮಕ್ಕಾಗಿ.**

1. ಕುಲಸಚಿವರು, ಬೆಂಗಳೂರು ವಿಶ್ವವಿದ್ಯಾಲಯ.
2. ಕುಲಸಚಿವರು, ಬೆಂಗಳೂರು ಕೇಂದ್ರ ವಿಶ್ವವಿದ್ಯಾಲಯ.
3. ಕುಲಸಚಿವರು, ಬೆಂಗಳೂರು ಉತ್ತರ ವಿಶ್ವವಿದ್ಯಾಲಯ.
4. ಜಂಟಿ ನಿರ್ದೇಶಕರು, ಪ್ರಾದೇಶಿಕ ಕಛೇರಿ, ಕಾಲೇಜು ಶಿಕ್ಷಣ ಇಲಾಖೆ, ಬೆಂಗಳೂರು.
5. ಎಲ್ಲಾ ಸರ್ಕಾರಿ / ಖಾಸಗಿ ಅನುದಾನಿತ / ಅನುದಾನರಹಿತ ಪದವಿ ಕಾಲೇಜುಗಳ ಪ್ರಾಂಶುಪಾಲರುಗಳಿಗೆ (ಬೆಂಗಳೂರು ಪ್ರಾದೇಶಿಕ ಜಂಟಿ ನಿರ್ದೇಶಕರ ಮೂಲಕ)
6. ಮಾಹಿತಿ ತಂತ್ರಜ್ಞಾನ ಅಧಿಕಾರಿಗಳು, ಮಾಹಿತಿ ಮತ್ತು ತಂತ್ರಜ್ಞಾನ ವಿಭಾಗ, ಕಾಲೇಜು ಶಿಕ್ಷಣ ಆಯುಕ್ತರ ಕಛೇರಿ, ಬೆಂಗಳೂರು-ಇಲಾಖಾ ವೆಬ್‌ಸೈಟ್‌ನಲ್ಲಿ ಪ್ರಕಟಿಸಲು ಸೂಚಿಸಿದೆ.

ಪ್ರತಿಯನ್ನು: - ಮಾಹಿತಿಗಾಗಿ

1. ಸರ್ಕಾರದ ಪ್ರಧಾನ ಕಾರ್ಯದರ್ಶಿಗಳ ಆಪ್ತಶಾಖೆಗೆ, ಶಿಕ್ಷಣ ಇಲಾಖೆ (ಉನ್ನತ ಶಿಕ್ಷಣ) ಬಹುಮಹಡಿಗಳ ಕಟ್ಟಡ, ಬೆಂಗಳೂರು.
2. ಆಯುಕ್ತರ ಆಪ್ತಶಾಖೆ, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ, ಬೆಂಗಳೂರು.
3. ಆಯುಕ್ತರ ಆಪ್ತಶಾಖೆ, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಹಾಗೂ ಆಯುಷ್ ಸೇವೆಗಳು, ಆನಂದರಾವ್ ವೃತ್ತ, ಬೆಂಗಳೂರು-560 009.
4. ನಿರ್ದೇಶಕರ ಆಪ್ತಶಾಖೆ, ವಾರ್ತಾ ಮತ್ತು ಪ್ರಚಾರ ಇಲಾಖೆ, ಇನ್‌ಫೆಂಟ್ರಿ ರಸ್ತೆ, ಬೆಂಗಳೂರು.
5. ನಿರ್ದೇಶಕರ ಆಪ್ತಶಾಖೆ, ಯುವಸಬಲೀಕರಣ ಮತ್ತು ಕ್ರೀಡಾ ಇಲಾಖೆ, ನೃಪತುಂಗ ರಸ್ತೆ, ಬೆಂಗಳೂರು.
6. ಆಯುಕ್ತರ ನಿರ್ದೇಶಕರ ಹೆಚ್ಚುವರಿ ನಿರ್ದೇಶಕರ ಮುಖ್ಯ ಆಡಳಿತಾಧಿಕಾರಿಗಳ ಆಪ್ತಶಾಖೆಗೆ, ಕೇಂದ್ರ ಕಛೇರಿ, ಬೆಂಗಳೂರು.
7. ಶ್ರೀ ಆರ್. ಶ್ರೀಕಾಂತ್ ಹಾಗೂ ಶ್ರೀ. ಜಿ. ಶ್ರೀನಿವಾಸ್, ನೋಡಲ್ ಅಧಿಕಾರಿಗಳು, ಕಾಲೇಜು ಶಿಕ್ಷಣ ಆಯುಕ್ತರ ಕಛೇರಿ, ಬೆಂಗಳೂರು - ಸೂಕ್ತ ಕ್ರಮಕ್ಕಾಗಿ.
8. ಕಛೇರಿ ಪ್ರತಿ.

# 4ನೇ ಅಂತರರಾಷ್ಟ್ರೀಯ ಯೋಗ ದಿನಾಚರಣೆ ಆಚರಿಸಲು ನಡೆದ ಸಭೆಯ ನಡವಳಿಗಳು

ಅಧ್ಯಕ್ಷರು : ಶ್ರೀ ಅಜಯ್ ಸೇಠ್, IAS, ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳು, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ, ವಿಕಾಸ ಸೌಧ, ಬೆಂಗಳೂರು

ಸಭಾ ಸ್ಥಳ : ಕೊಠಡಿ ಸಂಖ್ಯೆ : 222, ವಿಕಾಸ ಸೌಧ, ಬೆಂಗಳೂರು

ದಿನಾಂಕ : 25-05-2018 ರಂದು ಅಪರಾಹ್ನ 4-00 ಗಂಟೆ

**ಹಾಜರಾಗಿದ್ದ ವಿವಿಧ ಇಲಾಖೆಯ ಅಧಿಕಾರಿಗಳ ವಿವರ ಅನುಬಂಧದಲ್ಲಿ ಲಗತ್ತಿಸಿದೆ.**

ಸಭೆಯ ಆರಂಭದಲ್ಲಿ ಉಪನಿರ್ದೇಶಕರು, ಯೋಗ ಮತ್ತು ಪ್ರಕೃತಿ ಚಿಕಿತ್ಸೆ ರವರು ಸಭೆಗೆ ಸ್ವಾಗತಿಸುತ್ತಾ 2015 ರಿಂದ ರಾಜ್ಯಮಟ್ಟದಲ್ಲಿ ಅಂತರರಾಷ್ಟ್ರೀಯ ಯೋಗ ದಿನಾಚರಣೆಯನ್ನು ವಿಜೃಂಭಣೆಯಿಂದ ಆಚರಿಸಿದ ವಿಷಯವನ್ನು ಸಭೆಗೆ ಪವರ್‌ಪಾಯಿಂಟ್ ಪ್ರದರ್ಶನದ ಮೂಲಕ ತಿಳಿಸಿದರು. 2018ನೇ ಸಾಲಿನ ಅಂತರರಾಷ್ಟ್ರೀಯ ಯೋಗ ದಿನಾಚರಣೆಯು ಜೂನ್-21-2018 ರಲ್ಲಿ ಆಚರಿಸಬೇಕಾಗಿದ್ದು, ಇದನ್ನು ಆಚರಿಸುವ ಸಂಬಂಧ ಕರ್ನಾಟಕ ಸರ್ಕಾರದ ವಿವಿಧ ಇಲಾಖೆಗಳ ಸಮನ್ವಯದೊಂದಿಗೆ ಚರ್ಚಿಸಲು ಈ ಸಭೆಯನ್ನು ಕರೆದಿದ್ದು, ಸರ್ವ ಸದಸ್ಯರ ಸಹಕಾರವನ್ನು ಕೋರಿದರು.

ತದನಂತರ ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳು, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ರವರು ಸಭೆಯ ಅಜೆಂಡಾದಂತೆ ಅಂತರರಾಷ್ಟ್ರೀಯ ಯೋಗ ದಿನಾಚರಣೆಯನ್ನು ಕಂಠೀರವ ಹೊರಾಂಗಣ ಕ್ರೀಡಾಂಗಣದಲ್ಲಿ ನಡೆಸುವಂತೆ ಸೂಚಿಸಿದರು ಮತ್ತು ಈ ಕಾರ್ಯಕ್ರಮವನ್ನು ಯುವಜನ ಸಬಲೀಕರಣ ಮತ್ತು ಕ್ರೀಡಾ ಇಲಾಖೆಯವರ ಸಹಕಾರದೊಂದಿಗೆ ನಡೆಸಲು ಸೂಚಿಸಿದರು.

*ಕ್ರಮ : ಉಪನಿರ್ದೇಶಕರು, ಯೋಗ & ಪ್ರಕೃತಿ ಚಿಕಿತ್ಸೆ ಮತ್ತು ಜಂಟಿ ನಿರ್ದೇಶಕರು,ಯುವಜನ ಸಬಲೀಕರಣ ಮತ್ತು ಕ್ರೀಡಾ ಇಲಾಖೆ*

ಈ ಕಾರ್ಯಕ್ರಮದ ಬಗ್ಗೆ ಮಾಹಿತಿ ಮತ್ತು ಆಹ್ವಾನವನ್ನು ಸನ್ಮಾನ್ಯ ಮುಖ್ಯಂತ್ರಿಯವರಿಗೆ ನೀಡಬೇಕಾಗಿದ್ದು, ಇದರ ಕರಡನ್ನು ಕೂಡಲೇ ತಯಾರಿಸಿ ಸಮುಚ್ಚಿತ ಮಾರ್ಗದಲ್ಲಿ ಸನ್ಮಾನ್ಯ ಮುಖ್ಯಮಂತ್ರಿಯವರಿಗೆ ಆಹ್ವಾನವನ್ನು ನೀಡಲು ಆಯುಷ್ ಇಲಾಖೆಯ ನಿರ್ದೇಶಕರಿಗೆ ಸೂಚಿಸಿದರು.

*ಕ್ರಮ : ನಿರ್ದೇಶಕರು, ಆಯುಷ್ ಇಲಾಖೆ.*

ಹೊಸ ಆರೋಗ್ಯ ಸಚಿವರು ನಿಯೋಜನೆಗೊಂಡ ನಂತರ ಅವರಿಗೂ ಸಹ ಕಾರ್ಯಕ್ರಮದ ಬಗ್ಗೆ ಮಾಹಿತಿ ಹಾಗೂ ಆಹ್ವಾನವನ್ನು ನೀಡಿ ಕಾರ್ಯಕ್ರಮದ ಆಹ್ವಾನ ಪತ್ರಿಕೆಯನ್ನು ಸರ್ಕಾರಿ ಶಿಷ್ಟಾಚಾರದಂತೆ ತಯಾರಿಸಲು ನಿರ್ದೇಶನವನ್ನು ನೀಡಿದರು.

*ಕ್ರಮ : ಉಪನಿರ್ದೇಶಕರು, ಯೋಗ ಮತ್ತು ಪ್ರಕೃತಿ ಚಿಕಿತ್ಸೆ*

ಕಳೆದ ಸಾಲಿನಲ್ಲಿ ಪೂರ್ವಭಾವಿ ಕಾರ್ಯಕ್ರಮಗಳನ್ನು ನಡೆಸಲಾಗಿದ್ದು, ಈ ಬಾರಿ ಎಲ್ಲಾ ಕಾರ್ಯಕ್ರಮಗಳನ್ನು ಪ್ರಧಾನ ಕಾರ್ಯಕ್ರಮದಲ್ಲಿಯೇ ಜೋಡಿಸಿಕೊಳ್ಳಲು ಹಾಗೂ ಪೂರ್ವಭಾವಿ ಕಾರ್ಯಕ್ರಮಗಳನ್ನು ರದ್ದುಪಡಿಸಿ, ಪ್ರಧಾನ ಕಾರ್ಯಕ್ರಮಕ್ಕೆ ಸನ್ಮಾನ್ಯ ರಾಜ್ಯಪಾಲರಿಗೂ ಸಹ ಶಿಷ್ಟಾಚಾರದಂತೆ ಆಹ್ವಾನ ಪತ್ರಿಕೆಯನ್ನು ತಯಾರಿಸಿ ಕಾರ್ಯಕ್ರಮಕ್ಕೆ ಅವರನ್ನು ಬರುವಂತೆ ಕರೆಯೋಲೆಯನ್ನು ಸಿದ್ಧಪಡಿಸಲು ನಿರ್ದೇಶಕರು, ಆಯುಷ್ ಇಲಾಖೆಯವರಿಗೆ ಸೂಚಿಸಿದರು.

*ಕ್ರಮ : ನಿರ್ದೇಶಕರು, ಆಯುಷ್ ಇಲಾಖೆ*

• ಈ ಕಾರ್ಯಕ್ರಮವನ್ನು ವಿಜೃಂಭಣೆಯಿಂದ ಮಾಡಲು ಕೆಳಕಂಡ ಯೋಗ ಸರ್ಕಾರೇತರ ಸಂಸ್ಥೆಗಳಿಂದ ಯೋಗ ಶಿಬಿರಗಳನ್ನು ಹಮ್ಮಿಕೊಳ್ಳಲು ಒಟ್ಟು ರೂ..4.00 ಲಕ್ಷ ಅನುದಾನವನ್ನು ಸರ್ಕಾರದಿಂದ ಒದಗಿಸುವುದರೊಂದಿಗೆ ಅವರ ಸಹಯೋಗ ಪಡೆದು ಮತು ಆಯುಷ್ ವೈದ್ಯಕೀಯ ಕಾಲೇಜುಗಳ ಸಭೆಯನ್ನು ನಡೆಸಿ ಅವರ ಸಹಕಾರವನ್ನೂ ಸಹ ಪಡೆಯಲು ನಿರ್ದೇಶಕರಿಗೆ ಸೂಚಿಸಿದರು.

1. ಶ್ರೀ ಪತಂಜಲಿ ಯೋಗ ಸೇವಾ ಸಮಿತಿ, ನಂ. G-7,.'Sri Sai Himaja Apartment', ಜ್ಞಾನಪ್ಪನ ಹಳ್ಳಿ, ಬೇಗೂರು ಹೋ॥, ಬೆಂಗಳೂರು-560068.
2. ಯೋಗ ಗಂಗೋತ್ರಿ ಟ್ರಸ್ಟ್, ನಂ.31, 'ಶುಭ', 4ನೇ ಅಡ್ಡರಸ್ತೆ, 24ನೇ ಮುಖ್ಯರಸ್ತೆ, ಜೆ.ಪಿ. ನಗರ 7ನೇ ಹಂತ, ಬೆಂಗಳೂರು.
3. ಶ್ವಾಸ ಸಂಸ್ಥೆ, ನಂ. 108ಎಫ್, ಆರ್‌ಎಂವಿ 2ನೇ ಹಂತ, ಎಂ.ಎಲ್.ಎ. ಲೇಔಟ್, ಬಸ್ ನಿಲ್ದಾಣದ ಹತ್ತಿರ, ಭೂಪಸಂದ್ರ, ಬೆಂಗಳೂರು.
4. ಎಸ್-ವ್ಯಾಸ ಸಂಸ್ಥೆ, 'ಏಕನಾಥ ಭವನ', ನಂ.19, ಗವಿಪುರಂ ವೃತ್ತ, ಕೆಂಪೇಗೌಡ ನಗರ, ಬೆಂಗಳೂರು-560019.
5. ವ್ಯಕ್ತಿ ವಿಕಾಸ ಕೇಂದ್ರ, ಆರ್ಟ್ ಆಫ್ ಲಿವಿಂಗ್ (International Centre), ಉದಯಪುರ, 21ನೇ ಕಿ.ಮೀ. ಕನಕಪುರ ರಸ್ತೆ, ಬೆಂಗಳೂರು.
6. ಪತಂಜಲಿ ಯೋಗಾಶ್ರಮ ಟ್ರಸ್ಟ್, 'ಉಷಾ ಸದಾನಂದ ಕೃಪ', ನಂ.538, 4ನೇ ಅಡ್ಡರಸ್ತೆ, 8ನೇ ಮುಖ್ಯರಸ್ತೆ, ಹಂಪಿನಗರ, ವಿಜಯನಗರ 2ನೇ ಹಂತರ, ಬೆಂಗಳೂರು-560104.

*ಕ್ರಮ : ಉಪನಿರ್ದೇಶಕರು, ಯೋಗ ಮತ್ತು ಪ್ರಕೃತಿ ಚಿಕಿತ್ಸೆ*

ಕಾರ್ಯಕ್ರಮವನ್ನು ಅದ್ದೂರಿಯಾಗಿ ನಡೆಸಬೇಕಾಗಿದ್ದು, ಇದಕ್ಕಾಗಿ ಎನ್.ಸಿ.ಸಿ. ಕೆಡೆಟ್ಸ್, ಎನ್.ಎಸ್.ಎಸ್. ಕೆಡೆಟ್ಸ್, ಸ್ಕೌಟ್ಸ್ & ಗೈಡ್ಸ್, ನರ್ಸಿಂಗ್ ಕಾಲೇಜುಗಳು, ಪದವಿ ಪೂರ್ವ ಕಾಲೇಜುಗಳು, ಪ್ರೌಢಶಾಲೆಗಳು ಮತ್ತು ಆಸಕ್ತಿಯುಳ್ಳ ಪ್ರಾಥಮಿಕ ಶಾಲೆಗಳ ಆಯಾಯಾ ಇಲಾಖೆಗಳ ಮುಖ್ಯಸ್ಥರುಗಳನ್ನು ಸಂಪರ್ಕಿಸಿ, ಅವರಿಂದ ಆಸಕ್ತಿವುಳ್ಳ ಶಿಕ್ಷಣ ಸಂಸ್ಥೆಗಳ ಪಟ್ಟಿಯನ್ನು ತರಿಸಿಕೊಂಡು ಆ ಮಕ್ಕಳಿಗೆ / ವಿದ್ಯಾರ್ಥಿಗಳಿಗೆ ಭಾರತ ಸರ್ಕಾರವು ಸೂಚಿಸಿರುವ IDY-CYP ಶಿಷ್ಟಾಚಾರದಂತೆ ತರಬೇತಿಯನ್ನು ಆಯುಷ್ ಇಲಾಖೆಯೇ ನೀಡಬೇಕೆಂದು ಮತ್ತು ಅದಕ್ಕೆ ತಗಲುವ ಖರ್ಚು-ವೆಚ್ಚಗಳನ್ನು ಉಪನಿರ್ದೇಶಕರು, ಯೋಗ. ಪ್ರ.ಚಿ ರವರು ಸೂಚಿಸಿದಂತೆ ರೂ.4.00 ಲಕ್ಷಗಳಿಗೆ ಬಜೆಟ್‌ನ್ನು ತಯಾರಿಸಿ ಅನುಮತಿಯನ್ನು ಪಡೆದು ತರಬೇತಿಯನ್ನು ನೀಡಲು ಆಯುಷ್ ನಿರ್ದೇಶನಾಲಯಕ್ಕೆ ಸೂಚಿಸಿದರು.

*ಕ್ರಮ : ಉಪನಿರ್ದೇಶಕರು, ಯೋಗ ಮತ್ತು ಪ್ರಕೃತಿ ಚಿಕಿತ್ಸೆ*

ಕಳೆದ ಸಾಲಿನಲ್ಲಿ ಯೋಗ ದಿನಾಚರಣೆಗೆ 10000 ಕ್ಕಿಂತ ಹೆಚ್ಚು ಯೋಗಪಟುಗಳು ಭಾಗವಹಿಸಿದ್ದು, ಈ ಸಾರಿಯು ಅಷ್ಟೇ ಸಂಖ್ಯೆಯಲ್ಲಿ ವಿದ್ಯಾರ್ಥಿಗಳನ್ನು ಮತ್ತು ಯೋಗ ಅಭ್ಯಾಸಿಗಳನ್ನು ಸೇರಿಸಿ ವಿಜೃಂಭಣೆಯಿಂದ ಕಾಯಕ್ರಮವನ್ನು ಆಯೋಜಿಸಲು ಸಭೆಗೆ ಸೂಚಿಸಿದರು ಮತ್ತು

ಇಲಾಖೆಯವರು ಅವರ ಅಧೀನದ ಕಾಲೇಜುಗಳಿಂದ 500 ಜನ ನರ್ಸಿಂಗ್ ವಿದ್ಯಾರ್ಥಿಗಳನ್ನು ಪ್ರಾಥಮಿಕ ಮತ್ತು ಪ್ರೌಢಶಾಲೆ ಶಿಕ್ಷಣ ಇಲಾಖೆಯಿಂದ 2000 ವಿದ್ಯಾರ್ಥಿಗಳನ್ನು ಕಾಲೇಜು ಶಿಕ್ಷಣ ಇಲಾಖೆಯವರು ಎನ್‌ಸಿಸಿ-2000. ಎನ್‌ಎಸ್‌ಎಸ್-1000 ಹಾಗೂ 1000 ಇತರೆ ವಿದ್ಯಾರ್ಥಿಗಳನ್ನು ಸೇರಿಸಲು ಸಭೆಯಲ್ಲಿ ಭಾಗವಹಿಸಿದ ಆಯಾಯಾ ಇಲಾಖೆಗಳ ಪ್ರತಿನಿಧಿಗಳ ಸಹಕಾರವನ್ನು ಕೋರಿದರು ಮತ್ತು ಆಯುಷ್ ವೈದ್ಯಕೀಯ ಕಾಲೇಜುಗಳು ಸಹ 1000 ವಿದ್ಯಾರ್ಥಿಗಳನ್ನು ಈ ಸಮಾರಂಭಕ್ಕೆ ಹಾಜರಿರುವಂತೆ ಸಹ ಸೂಚಿಸಿದರು. ಇನ್ನುಳಿದ 2000 ರಿಂದ 3000 ಜನರನ್ನು ಯೋಗ ಎನ್.ಜಿ.ಒ. ಸಹಾಯವನ್ನು ಪಡೆದು ಕಾರ್ಯಕ್ರಮವನ್ನು ಅದ್ದೂರಿಯಾಗಿ ಆಚರಿಸಲು ನಿರ್ದೇಶಿಸಿದರು.

*ಕ್ರಮ : ಪ್ರಾಥಮಿಕ ಹಾಗೂ ಪ್ರೌಢಶಾಲೆ ಇಲಾಖೆ, ವೈದ್ಯಕೀಯ ಶಿಕ್ಷಣ ಇಲಾಖೆ,*
*ಕಾಲೇಜು ಶಿಕ್ಷಣ ಇಲಾಖೆ, ಡೈರಕ್ಟರ್ ಕೊಲಿಜಿಯೇಟ್ ಎಜುಕೇಷನ್,*
*ಟೆಕ್ನಿಕಲ್ ಡೈರಕ್ಟರ್, ಹೈಯರ್ ಎಜುಕೇಷನ್, ಜಂಟಿ ನಿರ್ದೇಶಕರು*
*ಆಯುಷ್ ಇಲಾಖೆ, ಉಪನಿರ್ದೇಶಕರು ಯೋಗ & ಪ್ರಕೃತಿ ಚಿಕಿತ್ಸೆ*

ಕಾರ್ಯಕ್ರಮಕ್ಕೆ ವಿದ್ಯಾರ್ಥಿಗಳು ಆಗಮಿಸಲು ಅನುಕೂಲವಾಗುವಂತೆ ಅವರಿಗೆ ಪ್ರಯಾಣ ಸೌಕರ್ಯವನ್ನು ಒದಗಿಸಲು ಖಾಸಗಿ ಕಾಲೇಜುಗಳ ಬಸ್‌ಗಳನ್ನು ನೀಡುವಂತೆ ಆ ಕಾಲೇಜುಗಳ ಆಡಳಿತ ಮಂಡಳಿಗಳಿಗೆ ಪತ್ರವನ್ನು ಬರೆದು ನಿಗದಿತ ಸಮಯದಲ್ಲಿ ವಿದ್ಯಾರ್ಥಿಗಳು ಬರಲು ಬಸ್ಸಿನ ಏರ್ಪಡನ್ನು ಮಾಡಲು ಸಭೆಗೆ ಸೂಚಿಸಿದರು.

*ಕ್ರಮ : ಪ್ರಾಥಮಿಕ ಹಾಗೂ ಪ್ರೌಢಶಾಲೆ ಇಲಾಖೆ, ವೈದ್ಯಕೀಯ ಶಿಕ್ಷಣ ಇಲಾಖೆ,*
*ಕಾಲೇಜು ಶಿಕ್ಷಣ ಇಲಾಖೆ, ಡೈರಕ್ಟರ್ ಕೊಲಿಜಿಯೇಟ್ ಎಜುಕೇಷನ್,*
*ಟೆಕ್ನಿಕಲ್ ಡೈರಕ್ಟರ್, ಹೈಯರ್ ಎಜುಕೇಷನ್, ಜಂಟಿ ನಿರ್ದೇಶಕರು*
*ಆಯುಷ್ ಇಲಾಖೆ, ಉಪನಿರ್ದೇಶಕರು ಯೋಗ & ಪ್ರಕೃತಿ ಚಿಕಿತ್ಸೆ*

ಮುಖ್ಯ ಕಾರ್ಯಕ್ರಮಕ್ಕೆ ಹಾಜರಾಗಿರುವ ಯೋಗಪಟುಗಳಿಗೆ ಬೆಳಗಿನ ಉಪಹಾರ ವ್ಯವಸ್ಥೆಯನ್ನು ಆಯುಷ್ ಇಲಾಖೆಯ ವತಿಯಿಂದ ನೀಡಲು ಸಲಹೆಯನ್ನು ನೀಡಿದರು ಮತ್ತು ಇದನ್ನು ಮಿಡ್-ಡೇ-ಮೀಲ್ ಕಾರ್ಯಕ್ರಮದಲ್ಲಿ ಹೊಂದಿಸಿಕೊಳ್ಳುವ ಸಾಧ್ಯಾಧ್ಯತೆಗಳನ್ನು ಪರಿಶೀಲಿಸಿ ಹಾಗೂ ಇಸ್ಕಾನ್‌ನಂತಹ ಸಂಸ್ಥೆಗಳಿಂದ ಆಹಾರದ ಪ್ಯಾಕೆಟ್‌ಗಳನ್ನು ರಿಯಾಯಿತಿ ದರದಲ್ಲಿ ಪಡೆಯಲು ಸಹ ಕೂಲಂಕುಷವಾಗಿ ಪರಿಶೀಲಿಸಿ ಕೆ.ಟಿ.ಟಿ.ಪಿ. ನಿಯಮದಂತೆ ಪಾರದರ್ಶಕ ರೀತಿಯಲ್ಲಿ ಆಹಾರವನ್ನು ನೀಡುವ ವ್ಯವಸ್ಥೆಯನ್ನು ಮಾಡಲು ಆಯುಷ್ ಇಲಾಖೆಗೆ ಸೂಚಿಸಿದರು.

*ಕ್ರಮ : ಆಯುಷ್ ಇಲಾಖೆ, ಬೆಂಗಳೂರು.*

ಕಾರ್ಯಕ್ರಮದ ಐ.ಇ.ಸಿ. ಚಟುವಟಿಕೆಗಳನ್ನು ಇಲಾಖೆಯ ಅನುದಾನದಿಂದಲೇ ನಡೆಸಲು ಹಾಗೂ ಇದಕ್ಕೆ ಬೇಕಾಗುವ ಸಹಕಾರವನ್ನು ಬಿ.ಬಿ.ಎಂ.ಪಿ. ಮತ್ತು ವಾರ್ತಾ ಮತ್ತು ಪ್ರಚಾರ ಇಲಾಖೆಯ ಸಹಕಾರದೊಂದಿಗೆ (ಉಚಿತ ಹೋರ್ಡಿಂಗ್‌ಗಳನ್ನು) ಸಹ ಪಡೆಯಲು ಸಭೆಗೆ ಸೂಚಿಸಿದರು.

*ಕ್ರಮ ಉಪನಿರ್ದೇಶಕರು ಯೋಗ & ಪ್ರಕೃತಿ ಚಿಕಿತ್ಸೆ*

ಕಾರ್ಯಕ್ರಮವನ್ನು ವ್ಯವಸ್ಥಿತವಾಗಿ ಆಯೋಜನೆ ಮಾಡುವ ನಿಟ್ಟಿನಲ್ಲಿ ಸಾರ್ವಜನಿಕರಿಗೆ ಉಪಯೋಗುವ ಕಿರು ಚಲನಚಿತ್ರ, ಡಾಕ್ಯುಮೆಂಟರಿಯನ್ನು ತಯಾರಿಸಲು ಅಥವಾ ಭಾರತ ಸರ್ಕಾರ ಆಯುಷ್ ಮಂತ್ರಾಲಯದಿಂದ ಈಗಾಗಲೇ ಸಿದ್ಧಪಡಿಸಿರುವ ಕಿರುಚಲನಚಿತ್ರಗಳನ್ನು ಕನ್ನಡಕ್ಕೆ ಭಾಷಾಂತರಿಸಿ ಜಿಲ್ಲೆಗಳು ಮತ್ತು ಆಸಕ್ತ ಸಂಸ್ಥೆಗಳಿಗೆ ನೀಡಲು ಸಭೆಗೆ ಸೂಚನೆಯನ್ನು ನೀಡಿದರು.

*ಕ್ರಮ : ಉಪನಿರ್ದೇಶಕರು ಯೋಗ & ಪ್ರಕೃತಿ ಚಿಕಿತ್ಸೆ*

ಉಪನಿರ್ದೇಶಕರು, ಯೋಗ ಮತ್ತು ಪ್ರಕೃತಿ ಚಿಕಿತ್ಸೆ ರವರು ಕಾರ್ಯಕ್ರಮಗಳನ್ನು ತಗಲುವ ಖರ್ಚು-ವೆಚ್ಚಗಳನ್ನು ಸಭೆಗೆ ವಿವರಿಸಿದಾಗ ಈ ಕೆಳಕಂಡಂತೆ ಖರ್ಚು-ವೆಚ್ಚಗಳಿಗೆ ಸಭೆಯಲ್ಲಿ ಅನುಮತಿಯನ್ನು ನೀಡಲಾಯಿತು.

| Sl. No. | COMPONENTS | Approx. AMOUNT |
|---|---|---|
| 1. | Stage arrangement & decoration | 20,00,000-00 |
| 2. | Sound system, carpet, LED screen | |
| 3. | Hoardings, Banners ,Decorations, Backdrop, Invitation, Publicity, venue, videography, Security, Drinking water facility, | |
| 4. | Inauguration expenses, memento photography, Printing materials like Pamphlets, Posters etc., | |
| 5. | Promotional material & other Miscellaneous expenses | |
| 6. | Breakfast for 23000 members (food court-VVIP & others) | |
| 7. | Press meet & Office expenses & meetings, IEC | |
| 8. | Training Expenditure | 5,00,000-00 |
| | **TOTAL** | **25,00,000-00** |
| | **District Level Programme (30 Districts) Rs. 1.00 lakh /District** | **30,00,000-00** |
| | **Grand Total** | **55,00,000-00** |

ಈ ಮೇಲ್ಕಂಡ ಖರ್ಚು-ವೆಚ್ಚಗಳಿಗೆ ಸರ್ಕಾರದ ಪಾರದರ್ಶಕದ ಅಧಿನಿಯಮ ಕೆ.ಟಿ.ಟಿ.ಪಿ ಮತ್ತು ಕೆಎಫ್‌ಸಿಯಂತೆ ಸರಕು ಮತ್ತು ಸೇವೆಗಳನ್ನು ಪಡೆದುಕೊಳ್ಳಲು ಸಹ ಆಯುಷ್ ನಿರ್ದೇಶನಾಲಯಕ್ಕೆ ಸೂಚಿಸಿದರು ಮತ್ತು ಈ ಮೇಲ್ಕಂಡ ಖರ್ಚು-ವೆಚ್ಚಗಳನ್ನು ಪರಿಶೀಲಿಸಿ ಚರ್ಚಿಸಿ ಸಭೆಯಲ್ಲಿ ಸನ್ಮಾನ್ಯ ಅಧ್ಯಕ್ಷರು ಅನುಮತಿಯನ್ನೂ ಸಹ ನೀಡಿದರು.

*ಕ್ರಮ : ಆಯುಷ್ ಇಲಾಖೆ, ಬೆಂಗಳೂರು.*

ಜಿಲ್ಲಾಮಟ್ಟದ ಕಾರ್ಯಕ್ರಮಗಳನ್ನು ಜಿಲ್ಲಾ ಆಡಳಿತದೊಂದಿಗೆ ಸಮಾಲೋಚಿಸಿ, ಜಿಲ್ಲಾ ಅಧಿಕಾರಿಗಳ ನೇತೃತ್ವದಲ್ಲಿ ಅದ್ದೂರಿಯಾಗಿ ಜಿಲ್ಲಾಮಟ್ಟದ ಅಂತರರಾಷ್ಟ್ರೀಯ ಯೋಗ ದಿನಾಚರಣೆಯನ್ನು ಆಚರಿಸಲು ಸಮಿತಿಗೆ ಸೂಚನೆಯನ್ನು ನೀಡಿದರು ಮತ್ತು ಈ ಕಾರ್ಯಕ್ರಮಗಳನ್ನು ಒಂದೇ ತೆರನಾಗಿ ನಡೆಸಲು ಅನುವಾಗುವಂತೆ ಆಯುಷ್ ಇಲಾಖೆಯು ಮಾರ್ಗಸೂಚಿಗಳನ್ನು ಸಿದ್ಧಪಡಿಸಿ ಕೂಡಲೇ ಎಲ್ಲಾ ಜಿಲ್ಲೆಗಳಿಗೆ ಕಳುಹಿಸಿ ಇದಕ್ಕಾಗಿ ಆಯುಷ್ ಇಲಾಖೆಯಿಂದ ಪ್ರತಿ ಜಿಲ್ಲೆಗೆ ರೂ.1.00 ಲಕ್ಷ ಅನುದಾನವನ್ನು ನೀಡಲು ಆಯುಷ್ ನಿರ್ದೇಶಕರಿಗೆ ಸೂಚಿಸಿದರು ಮತ್ತು ಇಲಾಖೆಯಿಂದ ಪ್ರತಿ ಜಿಲ್ಲಾ ಅಧಿಕಾರಿಗಳಿಗೆ ಪತ್ರವನ್ನು ಬರೆದು ಅವರಿಗೆ ಸೂಕ್ತ ನಿರ್ದೇಶನವನ್ನು ಕೂಡ ಇಲಾಖೆಯಿಂದ ನೀಡಲು ನಿರ್ದೇಶನವನ್ನು ನೀಡಿದರು.

*ಕ್ರಮ : ಉಪನಿರ್ದೇಶಕರು ಯೋಗ & ಪ್ರಕೃತಿ ಚಿಕಿತ್ಸೆ*

ಸಭೆಯ ಕೊನೆಯಲ್ಲಿ ಆಯುಷ್ ಇಲಾಖೆಯ ನಿರ್ದೇಶಕರು ಈ ಕಾರ್ಯಕ್ರಮವನ್ನು ಅದ್ಧೂರಿಯಾಗಿ ನಡೆಸಲು ಎಲ್ಲರ ಸಹಕಾರವನ್ನು ಕೋರುತ್ತಾ ಪ್ರತಿಧನ್ಯವಾದ ಸಮರ್ಪಣೆಯೊಂದಿಗೆ ಸಭೆಯನ್ನು ಮುಕ್ತಾಯಗೊಳಿಸಿದರು.

ನಿರ್ದೇಶಕರು,
ಆಯುಷ್ ಇಲಾಖೆ
ಬೆಂಗಳೂರು

ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳು
ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ,
ಬೆಂಗಳೂರು